ಉ. ಹಾರೊ ಬೂದಿಯಲ್ಲಿನ ರಾಸಾಯನಿಕಗಳ ಪ್ರಮಾಣ ಈ ಕೆಳಕಂಡಂತಿದೆ.

ಕ್ರ. ಸಂ.	ರಾಸಾಯನಿಕದ ಹೆಸರು	ಪ್ರಮಾಣ ಶೇಕಡಾಂಶದಲ್ಲಿ
1.	Silica	55-65%
2.	Iron	5-7%
3.	Alumina	22-25%
4.	Calcium	5-7%
5.	Magnesium	<1%
6.	Titanium	Traceable
7.	Manganese	<1%
8.	Phosphorous	<1%
9.	Sulphates	0.1%
10.	Potassium	0.09%
11.	Unburnt carbon	1-1.5%
12.	Alkali oxide	<1%

ಅಲ್ಲದೆ ಭಾರ ಲೋಹಗಳಾದ ಸತು ಮತ್ತು ಸೀಸ ಇತ್ಯಾದಿಗಳು ಹಾರು ಬೂದಿಯಲ್ಲಿ ಒಲಗೊಂಡಿರುತ್ತವೆ. ಮಲಿನ ವಸ್ತುಗಳು ನದಿಯ ನೀರಿಗೆ ಸೇರುವುದನ್ನು ತಡೆಗಟ್ಟಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಊ. ನದಿಯ ನೀರಿಗೆ ಮಲಿನ ವಸ್ತುಗಳು ಸೇರದಂತೆ ತಡೆಗಟ್ಟಲು ಕ್ರಮವನ್ನು ತೆಗೆದು ಕೊಳ್ಳಲಾಗಿರುತ್ತದೆ. ನದಿಯ ನೀರಿಗೆ ಶಾಖೋತ್ಪನ್ನ ಸ್ಥಾವರದಿಂದ ಮಲಿನ ವಸ್ತುಗಳ ವಿರಳ ಸೇರ್ಪಡೆಯನ್ನು ಗಮನಿಸಲಾಗಿದೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರದಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಬೆಂಗಳೂರು-ಮಂಗಳೂರು ನಡುವಣ ಪಾಣೆ ಮಂಗಳೂರು ಸೇತುವೆ ಕುಸಿತ

951 (389) - ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು-ಮಂಗಳೂರು ನಡುವಣಾ ಪಾಣೆ ಮಂಗಳೂರು ಬೃಹತ್ ಸೇತುವೆ ದುರ್ಬಲಗೊಂಡು ಕುಸಿದಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಸೇತುವೆಯನ್ನು ಯಾವಾಗ ನಿರ್ಮಿಸಲಾಗಿತ್ತು ಯಾರ ಕಾಲದಲ್ಲಿ ನಿರ್ಮಿಸಲಾಗಿತ್ತು, ಇದರ ಬಳಕೆ ಅವಧಿ ಎಷ್ಟು (ಆಯಸ್ಸು), ಇದರ ಉದ್ದ ಎಷ್ಟು?

ಇ. ಇದು ಶಿಥಿಲಗೊಳ್ಳಲು ಕಾರಣಗಳೇನು. ಕುಸಿಯುವ ಬಗ್ಗೆ ಈ ಮೊದಲೇ ಇಲಾಖೆಗೆ ತಿಳಿದಿತ್ತೇ ತಿಳಿದಿದ್ದಲ್ಲಿ ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳದಿರಲು ಕಾರಣಗಳೇನು?

ಈ. ಈ ಸೇತುವೆ ಭಾರಿ ಗಾತ್ರದ ವಾಹನಗಳ ಸಂಚಾರವನ್ನು ನಿಷೇದಿಸಲು ಕ್ರಮ ಜರುಗಿಸಲಾಗಿತ್ತೇ? ಈ ಸೇತುವೆಯು ಬೆಂಗಳೂರು- ಮಂಗಳೂರು ಹೆದ್ದಾರಿ ವ್ಯಾಪ್ತಿಗೆ ಬರುತ್ತದೆಯೇ.

ಉ. ಇದಕ್ಕೆ ಪರ್ಯಾಯವಾಗಿ ಬದಲಿ ಸೇತುವೆ ನಿರ್ಮಾಣ ಕಾರ್ಯ ನಡೆದಿಯೆಯೇ, ಅಥವಾ ಅದೇ ಸೇತುವೆಯನ್ನು ದುರಸ್ಥಿ ಮಾಡಲಾಗುವುದೇ.

ಊ. ಬದಲಿ ಸೇತುವೆ ನಿರ್ಮಾಣ ಉದ್ದೇಶ ಹೊಂದಿದ್ದರೆ ಅದರ ಕೆಲಸ ಯಾವ ಹಂತದಲ್ಲಿದೆ. ಈ ಕಾಮಗಾರಿಯ ಪ್ರಕಾರ್ಯ ವಿಳಂಬವಾಗಲು ಕಾರಣವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಮಂತ್ರಿಯವರು) :

ಅ. ಸದರಿ ಸೇತುವೆಯು ದುರ್ಬಲಗೊಂಡು, ಒಂದು ಅಂಕಣಕ್ಕೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ಈ ಸೇತುವೆಯನ್ನು 1914ರಲ್ಲಿ ಬ್ರಿಟಿಷ್ ಕಾಲದಲ್ಲಿ ನಿರ್ಮಿಸಲಾಗಿದೆ. ಇದರ ಬಳಕೆ ಅವಧಿ ಸುಮಾರು 100 ವರ್ಷಗಳು. ಈ ಸೇತುವೆಯ ಉದ್ದ 377 ಮೀಟರುಗಳು.

ಇ. ಸದರಿ ಸೇತುವೆಯು ಉಕ್ಕಿನ ಮೇಲ್ಕಟ್ಟಡವನ್ನು ಹೊಂದಿದ್ದು 88 ವರ್ಷ ಹಳೆಯದಾಗಿರುತ್ತದೆ. ತುಂಬಾ ಹಳೆಯದಾಗಿರುವ ಈ ಸೇತುವೆಯು ಕಡಲ ತೀರದ ಸಮೀಪದಲ್ಲಿರುವುದರಿಂದ ಹವಾಗುಣವು ಉಪ್ಪಿನ ಅಂಶ ಹೊಂದಿದ್ದು ಹಾಗೂ ಭಾರಿ ವಾಹನಗಳ ಓಡಾಟದಿಂದಾಗಿ ಶಿಥಿಲಗೊಂಡಿರುತ್ತದೆ. ಈ ಬಗ್ಗೆ ಇಲಾಖೆಗೆ ತಿಳಿದಿದ್ದರಿಂದ ಭಾರಿ ವಾಹನ ಸಂಚಾರವನ್ನು ನಿಷೇದಿಸಲು ಸೂಕ್ತ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿರುತ್ತದೆ.

ತುಕ್ಕು ನಿರೋಧಕ ಕ್ರಮವಾಗಿ ಈ ಸೇತುವೆಗೆ 2 ವರ್ಷಕ್ಕೊಮ್ಮೆ ಬಣ್ಣ ಬಳೆಯುವ ಮೂಲಕ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಆಗಿಂದಾಗ್ಗೆ ಸೇತುವೆಯ ಉಕ್ಕಿನ ಕೂಡು ಭಾಗಗಳನ್ನು ಬಲಪಡಿಸುವ ಮೂಲಕ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲಾಗಿದೆ.

ಈ. ಬಾರೀ ಗಾತ್ರದ ವಾಹನಗಳಾದ ಟ್ಯಾಂಕರ್ಸ್ ಮತ್ತು ಟ್ರಕ್‌ಗಳನ್ನು ನಿಷೇಧಿಸಲಾಗಿದೆ. ಈ ಸೇತುವೆಯು ಬೆಂಗಳೂರು- ಮಂಗಳೂರು ಹೆದ್ದಾರಿ ರಾ.ಹೆ. ನಂ. 48ರ ವ್ಯಾಪ್ತಿಗೆ ಬರುತ್ತದೆ.

ಉ. ಬದಲಿಯಾಗಿ, ಹೊಸ ಸೇತುವೆ ನಿರ್ಮಾಣ ಮಾಡಲಾಗುತ್ತಿದೆ. ಹಳೇ ಸೇತುವೆಯನ್ನು ಸಹ ದುರಸ್ತಿಪಡಿಸಲಾಗಿದೆ.

ಊ. ಹೊಸ ಸೇತುವೆಯ ಒಟ್ಟು 10 ಅಂಕಣಗಳಲ್ಲಿ 7 ಅಂಕಣಗಳು ಪೂರ್ಣಗೊಂಡಿದ್ದು, ನಿರ್ಮಾಣವು ಅಕ್ಟೋಬರ್ 2002 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ರಾಜ್ಯದಲ್ಲಿ ಯೋಜನಾ ಮಂಡಳಿ ಕುರಿತು

952 (397) - ಶ್ರೀ ಎಸ್. ಸುರೇಶ್ ಕುಮಾರ್(ರಾಜಾಜಿನಗರ) : ಮಾನ್ಯ ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯ ಯೋಜನಾ ಮಂಡಳಿ ಅಸ್ತಿತ್ವಕ್ಕೆ ಬಂದಿದ್ದು ಯಾವಾಗ?

ಆ. ಈ ಮಂಡಳಿಯ ಸದಸ್ಯರು ಯಾರು? ಮಂಡಳಿ ಇದುವರೆಗೂ ಎಷ್ಟು ಬಾರಿ ಸಭೆಗಳನ್ನು ನಡೆಸಿದೆ?

ಇ. ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷ ಸ್ಥಾನಕ್ಕೆ ಹಾಲಿ ಇರುವ ಉಪಾಧ್ಯಕ್ಷರು ರಾಜೀನಾಮೆ ನೀಡಿರುವುದು ನಿಜವೇ?

ಈ. ಹಾಗಿದ್ದಲ್ಲಿ, ಉಪಾಧ್ಯಕ್ಷರ ಸ್ಥಾನಕ್ಕೆ ಯಾರನ್ನು ನೇಮಕ ಮಾಡಲಾಗಿದೆ?

ಶ್ರೀ ಆರ್.ಬಿ. ತಿಮ್ಮಾಪುರ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ. ರಾಜ್ಯ ಯೋಜನಾ ಮಂಡಳಿಯು 1993 ರಲ್ಲಿ ಮೊದಲು ಅಸ್ತಿತ್ವಕ್ಕೆ ಬಂದಿತು. ಈ ಮಂಡಳಿಯನ್ನು ಕಾಲಕಾಲಕ್ಕೆ ಪುನರ್ ರಚಿಸಲಾಗಿದ್ದು, ಈಗಿರುವ ಮಂಡಳಿಯನ್ನು ಏಪ್ರಿಲ್ 2000 ರಲ್ಲಿ ಪುನರ್ ರಚಿಸಲಾಗಿರುತ್ತದೆ.